ಆಗೆಲ್ಲಾ
ಟಾಲ್‌ಸ್ಟಾಯ್ ಗಾರ್ಕಿ ಶೇಕ್ಸ್‌ಪಿಯರ್ ಚೆಕಾಫ್ಕಾ
ಫ್ಕ ಕಾಮೂ ಶೋಯಿಂಕ ಬ್ರೆಕ್ಟ್ ನೆರುಡಾ
ಎಲ್ಲಾ ನೆನಪಾಗುತ್ತಾರೆ.
ಅವರ ಸಾಲುಗಳ ನೆನಪಿನಲ್ಲಿ ವದ್ದೆಯಾದಂತೆ
ಒದಿನ ಮೆಲುಕು ಮನಸ್ಸನ್ನು ಆರ್ದ್ರಗೊಳಿಸುತ್ತದೆ.
ತಕ್ಷಣ ಕುವೆಂಪು ಪಕ್ಕದಲ್ಲಿ ನಿಂತು ಭುಜತಟ್ಟಿ
ಹೇಳುತ್ತಾರೆ:


'ಕಾಡಿನ ಕವಿ ನಾ
ನಾಡಿನ ಜನರೊಲಿದಾಲಿಪುದು

ನನ್ನ ಕೃತಿ ಕಲೆಯಲ್ಲ
ನಾನು ಕವಿಯಲ್ಲ
ಕಲೆಗಾಗಿ ಕಲೆಯೆಂದು
ಹೊಳ್ಳು ನೆಲೆಯಿಲ್ಲ

ಬದುಕುವುದೆ ನನಗೆ ಬೆಲೆ
ಸಾಧನೆಯ ಛಾಯೆ ಕಲೆ
ವಿಶ್ವಾತ್ಮವದಕೆ ನೆಲೆ.'

ಹೌದು ಅಕ್ಷರ ವಂಚಿತ ಸಮುದಾಯಗಳಿಗೆ
ಕುವೆಂಪು ಒಂದು ಭರವಸೆ. ಒಂದು ಆತ್ಮಶ್ರೀ.
ಅರಿವಿನ ಬೆರಗು.

ಇದೇ ಕರವು ಬೆನ್ನು ತಟ್ಟತೊಡಗಿದಂತೆ
ಅವರ ಅಕ್ಕ ಪಕ್ಕ ಅಕ್ಕಮ್ಮ ಲಕ್ಕಮ್ಮ ಹರಳಯ್ಯ
ಅಂಬಿಗರು ಸಾಲುಗಟ್ಟಿ ಜೊತೆಗೆ ನಿಲ್ಲುತ್ತಾರೆ.
ಅವರೊಟ್ಟಿಗೆ ನಿಂತ ಅರಿವಿನಲ್ಲಿ
ಅಳುಕು ಮಾಯವಾಗಿ ಅವರ ಮುಖಗಳನ್ನೇ
ನೋಡುತ್ತಾ ನೋಡುತ್ತಾ ಹೀಗೆ ಹೀಗೆ
ಕಳೆದು ಹೋದ ವಿಶ್ವಾಸ ಮರುಕಳಿಸಿ
ಮಾತನಾಡಬಯಸುತ್ತದೆ.



ಆಗ ಅಣ್ಣ ಹೇಳುತ್ತಾನೆ;
ನಿನಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ
ಅಲ್ಲಮ ದನಿಗೂಡಿಸುತ್ತಾನೆ
ಮಾತೆಂಬುದು ಜ್ಯೋತಿರ್ಲಿಂಗ
ಅಕ್ಕಮ್ಮ ಹಿಂಬಾಳೆ ಹಾಡುತ್ತಾಳೆ
ಭಾಷಾಗೂಳಿನ ಭಟರಂತೆ ಒಗರ
ಮೇಲೋಗರದಾಸೆಗೆ ಲೇಸಿನ ದ್ರವ್ಯಕ್ಕೆ
ಆಸೆ ಮಾಡಲಿಲ್ಲ. ಬಂದುದ ಕೈಕೊಂಡು
ಸಂದನಳಿದು ನಿಂದುದೆ ಭರಿತಾರ್ಪಣ.

ಎಲ್ಲರ ದನಿಗೆ ಕಿವಿಯಾಗಿ
ನಾನೂ ದನಿಯಾಗುತ್ತೇನೆ.
ಅವರಿಗೆಲ್ಲಾ ಶರಣು ಹೇಳುತ್ತೇನೆ.